ರಾಜ್ಯದಲ್ಲಿರುವ ದೇವದಾಸಿಯರ ಬಗ್ಗೆ

೭೪೨. **ಶ್ರೀಮತಿ ಸುಮಾವಸಂತ** (ವೀರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿರುವ ದೇವದಾಸಿಯರ ಸಂಖ್ಯೆ ಎಷ್ಟು ? (ಜಿಲ್ಲಾವಾರು)

೨. ಅವರು ಹೊಸ ಜೀವನ ರೂಪಿಸಿಕೊಳ್ಳಲು ಹಾಗೂ ದೇವದಾಸಿ ಪದ್ಧತಿಯಿಂದ ಮುಕ್ತ ರಾಗಲು ಸರ್ಕಾರದವರು ತೆಗೆದುಕೊಂಡ ಕಾರ್ಯಕ್ರಮವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

೧. ೬,೫೧೪

ಬೀದರ್	...	೩೦
ಗುಲ್ಬರ್ಗಾ	...	೫೦೯
ಬೆಳಗಾಂ	...	೨೪೫೯
ಧಾರವಾಡ	...	೫೨೫
ಬಿಜಾಪುರ	...	೧೨೧೩
ಬಳ್ಳಾರಿ	...	೧೫೦೯
ರಾಯಚೂರು	...	೨೬೯

೨. ಸರ್ಕಾರದವರು ತೆಗೆದುಕೊಂಡ ಕಾರ್ಯಕ್ರಮಗಳು.

೧. ಇಲಾಖೆಯಿಂದ ದೇವದಾಸಿಯರನ್ನು ಮದುವೆಯಾದಂತವರಿಗೆ 3,000 ಧನಸಹಾಯ ಕೊಡಲಾಗುತ್ತದೆ.

೨. ಸೌಂದತ್ತಿ ತಾಲ್ಲೂಕ್ ಬೆಳಗಾಂ ಜಿಲ್ಲೆಯಲ್ಲಿ ಹೆಣ್ಣುಮಕ್ಕಳು ಪ್ರಮಾಣಿಕ ಶಾಲೆ ತೆರೆಯಲಾಗಿದೆ. ಈ ಮಕ್ಕಳಿಗೆ ವಸತಿ ವಿದ್ಯಾಭ್ಯಾಸ ಮತ್ತು ವೃತ್ತಿಪರ ಶಿಕ್ಷಣ ಕೊಡಲಾಗುತ್ತದೆ.

೩. ಅಥಣಿ ತಾಲ್ಲೂಕ್ ಬೆಳಗಾಂ ಜಿಲ್ಲೆಯಲ್ಲಿ ರಕ್ಷಣೆ ಮತ್ತು ವಸತಿಗೆ ಬೇಕಾದಂತಹ ದೇವದಾಸಿ ಮಹಿಳೆಯರಿಗೆ ರಾಜ್ಯಗೃಹ ತೆರೆಯಲಾಗಿದೆ, ಇವರಿಗೆ ವೃತ್ತಿಪರ ತರಬೇತಿ ಕೊಟ್ಟು ಅವರ ಜೀವನೋಪಾಯ ಅವರು ನೋಡಿಕೊಳ್ಳಲು ಅನುಕೂಲ ಮಾಡಿಕೊಡಲಾಗುತ್ತದೆ.

೪. ದೇವದಾಸಿಯರಿಗೆ ಸರ್ಕಾರದ ವಿವಿಧ ಯೋಜನೆಗಳಾದ ಜನತಾ ಮನೆ, ಭಾಗ್ಯಜ್ಯೋತಿ ಸಮಗ್ರ ಗ್ರಾಮೀಣ ಯೋಜನೆಗಳಲ್ಲಿ ಜನತಾ ಮನೆಗಳನ್ನು ಕೊಟ್ಟು ಸಹಾಯ ಮಾಡಲು ಜಿಲ್ಲಾಧಿಕಾರಿಗಳಿಗೆ ಭನ್ನವಿಸಿಕೊಳ್ಳಲಾಗಿದೆ.

೫. ದೇವದಾಸಿಯರು ಗೃಹ ಕಲ್ಯಾಣ ಯೋಜನೆಯಡಿಯಲ್ಲಿ ಸಹಾಯ ಪಡೆಯುತ್ತಿದ್ದಾರೆ. ಈ ಯೋಜನೆಯಡಿಯಲ್ಲಿ ದೇವದಾಸಿಯರು ಆದಾಯಪರ ಚಟುವಟಿಕೆಗಳಲ್ಲಿ ತೊಡಗಲು ಶೇಕಡ ೨೫ರಷ್ಟು ರಿಯಾಯಿತಿಯ ಸಾಲವನ್ನು ಕೊಡಲಾಗುವುದು. ಸಾಮಾಜಿಕ ಪಿಡಂಗುಗಳಾದ ದೇವದಾಸಿ, ವರದಕ್ಷಿಣೆ ಮತ್ತು ಇತರ ಪಿಡುಗುಗಳ ನಿರ್ಮೂಲನಕ್ಕೆ ಒಂದು ವಿಶೇಷ ಘಟಕವನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ತೆರೆಯಲಾಗಿದೆ. ಇದರ ಪುಟ್ಟ ವಿಭಾಗಗಳನ್ನು ಬೆಳಗಾಂ ಬೀದರ್ ಜಿಲ್ಲೆಗಳಲ್ಲಿ ತೆರೆಯಲಾಗಿದೆ.

೬. ದೇವದಾಸಿ (ಸಮರ್ಪಣಾ ನಿಷೇಧ) ಅಧಿನಿಯಮದ ಬಗ್ಗೆ ಮತ್ತು ಜನಸಾಮಾನ್ಯರಲ್ಲಿ ಈ ಪದ್ಧತಿಯ ಬಗ್ಗೆ ಇರುವ ಮೂಢನಂಬಿಕೆಗಳನ್ನು ದೂರ ಮಾಡಲು ಹೆಚ್ಚು ಹೆಚ್ಚಾಗಿ ಪ್ರಕಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ದೇವದಾಸಿ ಪದ್ಧತಿ ಮತ್ತು ಇಲಾಖೆಯಿಂದ ದೇವದಾಸಿಯರಿಗೆ ದೊರಕುವ ಸಹಾಯದ ಬಗೆ ಒಂದು ಸಾಕ್ಷಾ ಚಿತ್ರಪಟವನ್ನು ತಯಾರು ಮಾಡಲಾಗಿದೆ.